## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 667 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಚಿದಾನಂದ್ ಎಂ ಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 09.03.2026 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

****

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಪತ್ತೆಯಾದ ಕ್ಯಾನ್ಸರ್ ಪ್ರಕರಣಗಳು ಎಷ್ಟು; ಅವುಗಳಲ್ಲಿ ಮಕ್ಕಳಲ್ಲಿ ಕಂಡು ಬಂದ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ವಿವರ ನೀಡುವುದು)</td><td>ರಾಷ್ಟ್ರೀಯ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಮೂರು ಸಾಮಾನ್ಯ ಕ್ಯಾನ್ಸರ್ ರೋಗಗಳಾದ ಬಾಯಿ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಮತ್ತು ಗರ್ಭಕಂಠ ಕ್ಯಾನ್ಸರ್ ರೋಗಗಳಿಗೆ ತುತ್ತಾಗಿರುವ ಒಟ್ಟು ಪ್ರಕರಣಗಳು ಸಂಖ್ಯೆಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ಬೆಂಗಳೂರು ಜನಸಂಖ್ಯೆಯ ಆಧಾರಿತ ಕ್ಯಾನ್ಸರ್ ನೋಂದಣಿ ಅಂದಾಜಿನ ಪ್ರಕಾರ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕ್ಯಾನ್ಸರ್ ಸಂಭವ (Incidence) ಹಾಗೂ ಮಕ್ಕಳಲ್ಲಿ (0-19ವರ್ಷ) ಬರಬಹುದಾದ ಕ್ಯಾನ್ಸರ್ ಸಂಭವವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.<br><br><table><tr><th>ವರ್ಷ</th><th>ಒಟ್ಟು ಕ್ಯಾನ್ಸರ್ ಪ್ರಕರಣಗಳು</th><th>ಮಕ್ಕಳಲ್ಲಿನ ಕ್ಯಾನ್ಸರ್ ಪ್ರಕರಣ</th></tr><tr><td>2023</td><td>86563</td><td>1801</td></tr><tr><td>2024</td><td>87855</td><td>1828</td></tr><tr><td>2025</td><td>89165</td><td>1882</td></tr></table></td></tr>
<tr><td>ಆ)</td><td>ಮಕ್ಕಳಲ್ಲಿ ಯಾವ ಪ್ರಕಾರದ ಕ್ಯಾನ್ಸರ್ ಹೆಚ್ಚಾಗಿ ಕಂಡು ಬರುತ್ತಿದೆ;<br>ಇದಕ್ಕೆ ಕಾರಣಗಳೇನು;</td><td>ಮಕ್ಕಳಲ್ಲಿ ಸಾಮಾನ್ಯವಾಗಿ ಲ್ಯೂಕೆಮಿಯಾ (30-35%), ಮೆದುಳು ಹಾಗೂ ನರಕ್ಕೆ ಸಂಬಂಧಪಟ್ಟ ಕ್ಯಾನ್ಸರ್(20-25%), ಉಳಿದಂತೆ ಲಿಂಫೋಮಾ, ನ್ಯೂರೋಬ್ಲಾಸ್ಟೋಮಾ, ಮೂಳೆಗೆ ಸಂಬಂಧಪಟ್ಟ ಕ್ಯಾನ್ಸರ್ ಮತ್ತು ಮೂತ್ರಪಿಂಡಕ್ಕೆ ಸಂಬಂಧಪಟ್ಟ ಕ್ಯಾನ್ಸರ್ ಪ್ರಕರಣಗಳು ಕಂಡು ಬರುತ್ತಿದೆ.<br><br>ಕಾರಣಗಳು: ಮಕ್ಕಳಲ್ಲಿ ಕ್ಯಾನ್ಸರ್ ಬರುವ ಸಂಭವನೀಯ ಅಪಾಯಕಾರಿ ಅಂಶಗಳಲ್ಲಿ ಅನುವಂಶಿಕತೆ, ಪ್ರಸವ ಪೂರ್ವ ಅಂಶಗಳು, ರೇಡಿಯೇಷನ್ ಎಕ್ಸ್‌ಪೋಷರ್‌ಗಳು ಮುಖ್ಯ ಕಾರಣಗಳೆಂದು ಹಲವು ಸಂಶೋಧನೆಗಳಿಂದ ಅಂದಾಜಿಸಲಾಗಿದೆ.</td></tr>
<tr><td>ಇ)</td><td>ಆಹಾರದ ಕಲಬೆರಕೆ ತಡೆಯಲು ಜಂಕ್ ಫುಡ್ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ</td><td>ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗದ ವತಿಯಿಂದ ಇಲಾಖೆಯ ಸಂಚಾರಿ ಆಹಾರ ಪ್ರಯೋಗಾಲಯದ (Food Safety on Wheels) ಮುಖಾಂತರ ರಾಜ್ಯಾದ್ಯಂತ ಆಹಾರ</td></tr>
</table>

| | | |
|---|---|---|
| | ಕೈಗೊಂಡಿರುವ ಕ್ರಮಗಳೇನು; | ಮಾದರಿಗಳ ವಿಶ್ಲೇಷಣೆ, ತರಬೇತಿ ನೀಡುವಿಕೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದ್ದು, ಕಳೆದ ಎರಡು ವರ್ಷಗಳಲ್ಲಿ 169 ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>• ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಗೋಬಿ ಮಂಚೂರಿ, ಕಾಟನ್ ಕ್ಯಾಂಡಿಗಳ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಸುವಿಕೆಯನ್ನು ನಿರ್ಬಂಧಿಸಿರುವ ಕುರಿತು ಮಾರ್ಚ್-2024ರ ಮಾಹೆಯಲ್ಲಿ ಸಲಹಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಅಲ್ಲದೆ ಕಬಾಬ್ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಸುವಿಕೆಯನ್ನು ನಿರ್ಬಂಧಿಸಿರುವ ಕುರಿತು ಜೂನ್-2024ರ ಮಾಹೆಯಲ್ಲಿ ಸಲಹಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.<br>• ಕರಿದ ಹಸಿರು ಬಟಾಣಿಗಳಲ್ಲಿ ಅನುಮೋದಿತವಲ್ಲದ ಕೃತಕ ಬಣ್ಣವನ್ನು ಬಳಸುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಅನುಮೋದಿತವಲ್ಲದ ಕೃತಕ ಬಣ್ಣವನ್ನು ಬಳಸದಂತೆ ಆಹಾರ ಉದ್ದಿಮೆದಾರರಿಗೆ ಮತ್ತು ಸಾರ್ವಜನಿಕರಿಗೆ ಸಲಹಾ ಪ್ರಕಟಣೆಯನ್ನು ಏಪ್ರಿಲ್-2025ರ ಮಾಹೆಯಲ್ಲಿ ಹೊರಡಿಸುವ ಮೂಲಕ ಅರಿವು ಮೂಡಿಸಲಾಗಿರುತ್ತದೆ.<br>• ಇಡ್ಲಿ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಬಳಸುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಹಿನ್ನೆಲೆಯಲ್ಲಿ ಹೋಟೆಲ್/ ರೆಸ್ಟೋರೆಂಟ್‌ಗಳು ಮತ್ತು ಬೀದಿ ಬದಿ ವ್ಯಾಪಾರಿಗಳ ಆಹಾರ ಮಳಿಗೆಗಳಿಗೆ ಪರಿಶೀಲನಾ ಭೇಟಿ ನೀಡಲಾಗಿದ್ದು, ಇಡ್ಲಿ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಅನ್ನು ಬಳಸದಂತೆ ಅರಿವು ಮೂಡಿಸಲಾಗಿರುತ್ತದೆ.<br>• 2025-26ನೇ ಸಾಲಿನಲ್ಲಿ ವಿಶೇಷ ಆಂದೋಲನವನ್ನು ಕೈಗೊಳ್ಳುವ ಮುಖಾಂತರ 975 ಜಂಕ್ ಫುಡ್ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿರುತ್ತದೆ.<br>• ಫೆಬ್ರವರಿ-2026ರ ಮಾಹೆಯಲ್ಲಿ ಜಂಕ್ ಫುಡ್‌ಗಳಾದ ಪಿಜ್ಜಾ ಮತ್ತು ಬರ್ಗರ್‌ಗಳ 81 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಎಲ್ಲಾ ಮಾದರಿಗಳು ಸುರಕ್ಷಿತ ಎಂದು ವರದಿಯಾಗಿರುತ್ತವೆ.<br>ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕಳೆದ ಎರಡು ವರ್ಷಗಳಲ್ಲಿ ಆಹಾರದ ಗುಣಮಟ್ಟ, ಸುರಕ್ಷತೆ, ಶುಚಿತ್ವ ಮತ್ತು ನೈರ್ಮಲ್ಯತೆಗೆ ಹಾಗೂ ಕರಿದ ಎಣ್ಣೆಯ ಮರುಬಳಕೆಗೆ ಸಂಬಂಧಿಸಿದಂತೆ 33453 ಹೋಟೆಲ್/ರೆಸ್ಟೋರೆಂಟ್/ಬೀದಿ ಬದಿ ಆಹಾರ ಉದ್ದಿಮೆದಾರರಿಗೆ FoSTaC ತರಬೇತಿಯನ್ನು ನೀಡಲಾಗಿರುತ್ತದೆ. |
| ಈ) | ಕ್ಯಾನ್ಸರ್ ರೋಗಕ್ಕೆ ರಾಜ್ಯದ ಎಷ್ಟು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ; ಸದರಿ ಆಸ್ಪತ್ರೆಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ 16 ಜಿಲ್ಲೆಗಳಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಡೇ ಕೇರ್ ಕಿಮೋಥೆರಪಿ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸದರಿ ಆರೈಕೆ ಕೇಂದ್ರಗಳಲ್ಲಿ ಮುಂದುವರೆದ ಕೀಮೋಥೆರಪಿ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.<br><br>ಸದರಿ ಆರೈಕೆ ಕೇಂದ್ರಗಳಲ್ಲಿ ಪ್ರತ್ಯೇಕ ಸಿಬ್ಬಂದಿಗಳು ನೇಮಕಗೊಂಡಿರುವುದಿಲ್ಲ. |

| | | |
|---|---|---|
| | ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು: | |
| ಉ) | ಕ್ಯಾನ್ಸರ್ ರೋಗಕ್ಕೆ ಮತ್ತು ಜಿಲ್ಲಾ ಮಟ್ಟದಲ್ಲೇ ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ 16 ಜಿಲ್ಲೆಗಳಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಡೇ ಕೇರ್ ಕಿಮೋಥೆರಪಿ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸದರಿ ಆರೈಕೆ ಕೇಂದ್ರಗಳಲ್ಲಿ ಮುಂದುವರೆದ ಕೀಮೋಥೆರಪಿ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.<br><br>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗೃಹ ಆರೋಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಸದರಿ ಯೋಜನೆಯಡಿಯಲ್ಲಿ 03 ಸಾಮಾನ್ಯ ಕ್ಯಾನ್ಸರ್‌ಗಳ ಬಗ್ಗೆ ಸಾರ್ವಜನಿಕರಿಗೆ ಅರಿವು, ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ. |

ಆಕುಕ 66 ಎಸ್‌ಬಿವಿ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ಅನುಬಂಧ-1

| Sl No | ವರ್ಷಗಳು | 03 ಸಾಮಾನ್ಯ ಕ್ಯಾನ್ಸರ್ ರೋಗಗಳು | ಸಾಮಾನ್ಯ ಕ್ಯಾನ್ಸರ್ ರೋಗಕ್ಕೆ ತುತ್ತಾದವರ ಒಟ್ಟು ಸಂಖ್ಯೆ | TOTAL |
|---|---|---|---|---|
| 1 | ಏಪ್ರಿಲ್-2023-ಮಾರ್ಚ್ 2024 | ಬಾಯಿ ಕ್ಯಾನ್ಸರ್ | 2,845 | 5,490 |
| | | ಸ್ತನ ಕ್ಯಾನ್ಸರ್ | 995 | |
| | | ಗರ್ಭಕಂಠದ ಕ್ಯಾನ್ಸರ್ | 1,650 | |
| 2 | ಏಪ್ರಿಲ್-2024-ಜನವರಿ 2025 | ಬಾಯಿ ಕ್ಯಾನ್ಸರ್ | 2,443 | 4,887 |
| | | ಸ್ತನ ಕ್ಯಾನ್ಸರ್ | 1,110 | |
| | | ಗರ್ಭಕಂಠದ ಕ್ಯಾನ್ಸರ್ | 1,334 | |
| 3 | ಏಪ್ರಿಲ್-2025-ಜನವರಿ 2026 | ಬಾಯಿ ಕ್ಯಾನ್ಸರ್ | 1,244 | 2,204 |
| | | ಸ್ತನ ಕ್ಯಾನ್ಸರ್ | 506 | |
| | | ಗರ್ಭಕಂಠದ ಕ್ಯಾನ್ಸರ್ | 454 | |

Deputy Director,
State NCD Cell
Ground Floor East Wing, H & FW. Services
Arogya Soudha, 1st Cross
Leprosy Hospital Compound



File No. HFW-SBV/66/2026-US-HLTH1-HEALTH AND FAMILY WELFARE SEC (Computer No. 2119530)
Generated from eOffice by LAKSHMAN. P, HFW-HEALTH2-ASST2(LP), ASSISTANT 2, HEALTH AND FAMILY WELFARE SEC on 09/04/2026 04:38 PM